ಎಲ್ಲರನ್ನು ಪರಿಚಯ ಮಾಡಿಸುತ್ತೇನೆ' ಎಂದು ಕರೆದು ಅವರ ದೊಡ್ಡ ಗುಂಪಿನೊಳಗೆ ನನ್ನನ್ನು ನಿಲ್ಲಿಸಿದಾಗ ನನಗೇನೋ ಒಂದು ಹೊಸ ಅನುಭೂತಿಯಾಯಿತು. ಎಲ್ಲರೂ ನನ್ನನ್ನು ಪ್ರೀತಿಯಿಂದ ಮಾತನಾಡಿಸುವವರೇ. ನನ್ನ ಕೆನ್ನೆ ಹಿಂಡಿ, ಕೈಹಿಡಿದಮಕಿ, ಹೆಗಲಮೇಲೆ ಕೈಹಾಕಿ, ತಬ್ಬಿಹಿಡಿದು ನೂರಾರು ಪ್ರಶ್ನೆಗಳ ಸುರಿಮಳೆ. ಅವರ್ಯಾರೂ ನನಗೆ ಪರಿಚಿತರಲ್ಲದಿದ್ದರೂ ಒಂದು ಕ್ಷಣ ಅವರ ಅತಿಯಾದ 'ಫಿಸಿಕಲ್ ಇಂಟಿಮಸಿ'ಯಿಂದ ಕಸಿವಿಸಿಯಾದರೂ ಅವರೆಲ್ಲರೂ ನನ್ನ ಬಗ್ಗೆ ವಿಶೇಷವಾದ ಪ್ರೀತಿಯುಳ್ಳವರು ಎಂದು ಮಾತ್ರ ತಿಳಿಯಿತು. ಅವರನ್ನು ನನ್ನ ಮುಖಭಾವದಿಂದಾಗಲಿ, ನನ್ನ ವರ್ತನೆಯಿಂದಾಗಲೀ ನೋಯಿಸಬಾರದೆಂದು ಹಾಗೂ ಅವರೊಡನೆ ತಾಳ್ಮೆಯಿಂದ ವರ್ತಿಸಬೇಕೆಂದು ನಿರ್ಧರಿಸಿದೆ.

ಕಾರಿನಲ್ಲಿ ಮಾತನಾಡುತ್ತಾ, ಅವರ ನಗೆ, ಕೇಕೆಗಳಲ್ಲಿ ಮನೆ ತಲುಪಿದ್ದೇ ತಿಳಿಯಲಿಲ್ಲ. ಕಾರು ಒಂದು ದೊಡ್ಡ ತೋಟವಿರುವ ಹಳೆಯ ಮನೆಯ ಮುಂದೆ ನಿಂತಿತು. ಮಮ್ಮಿ ಕಾರಿನಿಂದಿಳಿದು ಸುಮ್ಮನೇ ನಿಂತುಬಿಟ್ಟಳು. ಅವರೆಲ್ಲರೂ ನಮ್ಮ ಲಗೇಜ್ ಎತ್ತಿಕೊಳ್ಳುವುದರಲ್ಲಿ ನಿರತರಾಗಿದ್ದರು. ಮಮ್ಮಿಯ ಕಣ್ಣಂಚಿನಲ್ಲಿ ನೀರು ತುಂಬಿತ್ತು. ನಾನು ಪಕ್ಕದಲ್ಲಿ ಹೋಗಿ ನಿಂತೆ. ಮಮ್ಮಿಯನ್ನೊಮ್ಮೆ, ಮನೆಯನ್ನೊಮ್ಮೆ ನೋಡಿದೆ. ಮಮ್ಮಿಯ ಭಾವನೆಗಳು ನನಗರ್ಥವಾಗಲಿಲ್ಲ. ಅವಳು ನನ್ನ ಕಡೆ ನೋಡಿ, 'ಸಂಯುಕ್ತಾ, ಇದು ನಾನು ಬೆಳೆದ ಮನೆ. ನನ್ನಮ್ಮನ ಮನೆ, ನಿನ್ನಜ್ಜಿಯ ಮನೆ.' ಎಂದಳು.

ನಾವು ಮನೆಯೊಳಗೆ ನಡೆದೆವು. ನಮ್ಮ ಕೋಣೆಗೆ ಕರೆದೊಯ್ದು ನಮಗೆ ರೆಸ್ಟ್ ತೆಗೆದುಕೊಳ್ಳಲು ಹೇಳಿದರು. 'ಅಬ್ಬಾ, ಕೊನೆಗೂ ನಮ್ಮನ್ನು ನಮ್ಮ ಪಾಡಿಗೆ ಬಿಟ್ಟರಲ್ಲ. they are so noisy'

`ಸಂಯುಕ್ತಾ, ನಿನಗೆ ಅವರಾಡಿದ ಮಾತು, ಪ್ರೀತಿ ಎಲ್ಲ ಬರೀ noisy ಅನ್ನಿಸ್ತಾ? ನಿನ್ನದೇನು ತಪ್ಪಿಲ್ಲ ಬಿಡು. ಹಾಂ ನೀನು ರೆಸ್ಟ್ ಮಾಡು. ನಾನು ಮನೆಯ ಸುತ್ತ ಹೋಗಿ ಬರ್ತೀನಿ' ಎಂದು ಹೇಳಿ ಮಮ್ಮಿ ಹೊರಟರು. ನಾನು ಯೋಚಿಸುತ್ತ ಮಲಗಿದೆ. ಹಾಂ, ಶರ್ಮಿಳಾಳನ್ನು ಭೇಟಿ ಮಾಡುವ ಕುತೂಹಲವಿತ್ತು. ಅದು ಹೇಗೆ ತಂದೆ ತಾಯಿ ನಿರ್ಧರಿಸಿದ ಹುಡುಗನನ್ನು ಮದುವೆಯಾಗುತ್ತಿದ್ದಾಳೋ ಏನೋ? ಏಸಿ ಇಲ್ಲದ ರೂಮಿನಲ್ಲಿ ಮಲಗುವುದು ಕಷ್ಟವೆನಿಸಿದರೂ ನಿದ್ರೆ ಕಣ್ತುಂಬಿತ್ತು. ಅದೆಷ್ಟು ಹೊತ್ತು ಹಾಗೆ ಮಲಗಿದ್ದೆನೋ ಎಚ್ಚರವಾದಾಗ ಹೊರಗಡೆ ಜೋರಾಗಿ ನಗುವ ಮಾತನಾಡುವ ಸದ್ದು ಕೇಳಿಸಿತು. ನನ್ನ ರೂಮಿನ ಬಾಗಿಲು ಇದ್ದಕ್ಕಿದ್ದಂತೆ ದಢಾರ್ ಎಂದು ತೆಗೆದುಕೊಂಡ ಸದ್ದಿಗೆ ಬೆಚ್ಚಿಬಿದ್ದು ಬಾಗಿಲತ್ತ ತಿರುಗಿದೆ. 'ಹಾಯ್, ಸಂಯುಕ್ತಾ, ನಾನು ಶರ್ಮಿಳಾ. ಗುರುತು ಸಿಕ್ತಾ?' ಎನ್ನುತ್ತಾ ಜೋರಾಗಿ ನಗುತ್ತಾ ಶರ್ಮಿಳಾ ನನ್ನ ಮುಂದೆ ನಿಂತಿದ್ದಳು. ಚೂಡಿದಾರ್, ದುಪ್ಪಟ್ಟಾ, ಉದ್ದ ಜಡೆ, ಬಿಂದಿ ಅಂತೆಲ್ಲಾ ಶರ್ಮಿಳಾಳನ್ನು ಕಲ್ಪನೆ ಮಾಡಿಕೊಂಡಿದ್ದೆ. ಅವಳು ನೋಡಿದ್ರೆ ನನ್ನ ಹಾಗೇ ಶಾರ್ಟ್ಸ್ ಹಾಕ್ಕೊಂಡು ಕೂದಲು ಹೆಗಲಿನವರೆಗೆ ಕತ್ತರಿಸಿಕೊಂಡಿದ್ದಾಳೆ. ಆದರೂ ನನಗೂ ಅವಳಿಗೂ ಏನೋ ವ್ಯತ್ಯಾಸ ಇದೆ ಎನ್ನಿಸಿತು.

ನನ್ನಷ್ಟೇ ವಯಸ್ಸಿನವಳು... ಆದರೆ ಎಷ್ಟು ನನಗಿಂತ ಭಿನ್ನ ಎನಿಸಿತು. ಏನೋ ಒಂದು ರೀತಿಯ ಗೊಂದಲ ಎನಿಸಿ, 'ಒಂದ್ ನಿಮಿಷ ಬರ್ತೀನಿ' ಎನ್ನುತ್ತಾ ವಾಶ್ ರೂಮ್‌ಗೆ ಎದ್ದುಹೋದೆ. ನಾನು ಹೊರಗೆ ಬರುವುದನ್ನೇ ಕಾಯುತ್ತಾ ನಿಂತಿದ್ದ ಶರ್ಮಿಳಾ, 'ಬಾ ಹೊರಗೆ ಹೋಗೋಣ. ಎಲ್ಲರೂ ನಿನ್ನ ಜೊತೆ ಮಾತನಾಡಲು ಕಾಯ್ತಾ ಇದ್ದಾರೆ' ಎಂದು ನನ್ನ ಕೈಹಿಡಿದೆಳೆದಳು.

ರುಚಿರುಚಿಯಾದ ಇಡ್ಲಿ-ವಡೆ, ಸಾಂಬಾರ್ ಚಟ್ನಿಯ ಬ್ರೇಕ್‌ಫಾಸ್ಟ್ ಕಾಯುತ್ತಾ ಇತ್ತು. ಎಲ್ಲರಿಗೂ ನನ್ನನ್ನು ಏನೋ ಒಂದು ಕೇಳುವ ಕುತೂಹಲ. ನನ್ನ ಓದಿನ ಬಗ್ಗೆ, ನನ್ನ ಕೆಲಸದ ಬಗ್ಗೆ, ಕೇಳಿಯಾದ ಮೇಲೆ, ಅಮ್ಮನ ಅಣ್ಣನ ಹೆಂಡತಿ, ನನ್ನ ಅತ್ತೆ, ಮದುವೆ..... ನಿನ್ನ ಮದುವೆ ಯಾವಾಗ.... ಸುಮಾ ಹುಡ್ಗ ಗಿಡ್ಗ ನೋಡಿದ್ಯಾ ಅಥವಾ ನಾವೇ ಇಲ್ಲೇ ನೋಡೋಣವಾ? ನಾನು ತಕ್ಷಣ ಗೊಂದಲಕ್ಕೀಡಾಗಿ ಬಿಕ್ಕಲು ಪ್ರಾರಂಭಿಸಿದೆ. ಮಮ್ಮಿ ನನ್ನನ್ನೇ ನೋಡುತ್ತಾ ಹೇಳಿದಳು... 'ಹೂಂ ಮದುವೆ ಮಾಡ್ಬೇಕು ಇವಳೀಗೂ'.

ನಾನು ಶರ್ಮಿಳಾ ಕೈ ಹಿಡಿದು, 'ಬಾ ನಿನ್ನ ಹುಡುಗನ ಫೋಟೋ ತೋರಿಸು' ಎಂದು ಹೊರಗೆ ತೋಟಕ್ಕೆ ಕರೆದೊಯ್ದೆ. ಅವಳು, ನಾನು ಅಲ್ಲೇ ಇದ್ದ ಬೆಂಚಿನ ಮೇಲೆ ಕೂತಾದ ಮೇಲೆ ಶರ್ಮಿಳಾ ನಿಧಾನವಾಗಿ ತನ್ನ ಮೊಬೈಲ್‌ನಲ್ಲಿ ಆ ಹುಡುಗನ ಫೋಟೋ ತೋರಿಸಿದಳು. ಅವಳ ಮುಖದಲ್ಲಿ ನಾನು ಎಣಿಸಿದ